ದಿನಾಂಕ **23-01-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟಿ ಸವಾಲು ಃ ಶ್ರೀ ಬಿ ಎಂ .ಜೆ.  ವಾದಿ ಪರ ವಕೀಲರಿಂದ -

ನಾನು 3 ನೇ ತರಗತಿ ಓದಿರುತ್ತೇನೆ. ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಸರ್ವೆ ನಂ. 169/2 ರಲ್ಲಿ ನಮ್ಮ ತಂದೆಯವರು ಮೊದಲು 4 ಎಕರೆ ಜಮೀನು ಖರೀದಿ ಮಾಡಿದ್ದರು. ಸರ್ವೆ ನಂ. 166/5 ರಲ್ಲಿ 1 ಎಕರೆ 12 ಗುಂಟೆ ಜಮೀನನ್ನು 7 ನೇ ಪ್ರತಿವಾದಿ ಶಂಕರ ಚನ್ನಪ್ಪ ಇವರ ಖರೀದಿ ಮಾಡಿರುತ್ತಾರೆ. 7 ನೇ ಪ್ರತಿವಾದಿ ಸದ್ರಿ ಜಮೀನನ್ನು ಸ್ವಂತ ಖರೀದಿ ಮಾಡಿರುತ್ತಾರೆ ಎಂದರೆ ಸರಿ . ಶಂಕರ ಚನ್ನಪ್ಪ ಇವರು ಸ್ವಂತ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ . ನಾವು 159/3 ರ ಜಮೀನಿನ

ನಮ್ಮ ಹಿಸ್ಸೆಯ ಜಮೀನಿನ ಮನೆಯಲ್ಲಿ ವಾಸವಾಗಿರುತ್ತೇವೆ ಎಂದರೆ ಸರಿ . ವಾದಿ ಅಪ್ಪಣ್ಣ ಮತ್ತು ಪ್ರತಿವಾದಿ 1 ರಿಂದ 4 ರವರು ತಮ್ಮ ಹಿಸ್ಸೆಯ ಜಮೀನಿನಲ್ಲಿರುವ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ .

ವಾದಿ ಅಪ್ಪಣ್ಣ ಮತ್ತು ಪ್ರತಿವಾದಿ 1 ರಿಂದ 4 ರವರು ತಮ್ಮ ಹಿಸ್ಸೆಯ ಜಮೀನಿನಲ್ಲಿರುವ ಕಬ್ಬನ್ನು ಕಾರಖಾನೆಗೆ ತಮ್ಮ ಹೆಸರಿನಲ್ಲಿ ಕಳುಹಿಸುತ್ತಾರೆ ಎಂದರೆ ಸರಿ . ನಮ್ಮ ಹಿಸ್ಸೆಯಲ್ಲಿರುವ ಜಮೀನಿನ ಕಬ್ಬನ್ನು ನಮ್ಮ ಹೆಸರಿನಲ್ಲಿ ಕಳುಹಿಸುತ್ತೇವೆ ಎಂದರೆ ಸರಿ . 7 ನೇ ಪ್ರತಿವಾದಿ ತನ್ನ ಜಮೀನಿನ ಕಬ್ಬನ್ನು ತನ್ನ ಹೆಸರಿನಲ್ಲಿ ಕಳುಹಿಸುತ್ತಾರೆ ಎಂದರೆ ಸರಿ . ವಾದಿ ಅಪ್ಪಣ್ಣ ಮತ್ತು ಪ್ರತಿವಾದಿ 1 ರಿಂದ 4 ರವರ ಹಿಸ್ಸೆ ಮತ್ತು 5 ರಿಂದ 7 ರವರ ಹಿಸ್ಸೆಗಳಿಗೆ ಯಾವುದೆ ಹಸ್ತಕ್ಷೇಪ ಇಲ್ಲ ಎಂದರೆ ಸರಿ . ಬಸವಣ್ಣೆ ಇವರ ಮಕ್ಕು ವಾದಿ , ಪ್ರತಿವಾದಿ ನಂ. 3 ಮತುತ 4 ಎಂದರೆ ಸರಿ . ಬಸವಣ್ಣಿ ಇವರ ಹೆಂಡತಿ ಸುಶೀಲಾ ಎಂದರೆ ಸರಿ . ವಾದಿ ಈ ದಾವೆಯನ್ನು 1 ರಿಂದ 4 ನೇ ಪ್ರತಿವಾದಿಯರ ವಿರುದ್ದ. ಪಾಲು ವಿಭಾಗಕ್ಕಾಗಿ ಸಲ್ಲಿಸಿರುತ್ತಾರೆ ಎಂದರೆ ಸರಿ . ವಾದಿ ತನ್ನ ತಂದೆಯ ಪಾಲಿನ ಹಿಸ್ಸೆಯನ್ನು ಕೇಳಿರುತ್ತಾರೆ ಎಂದರೆ ಸರಿ .

**( ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಿ ಮುಂದುಾಡಲಾಯಿತು)**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ